ಆ) ೧೯೭೯-೮೦ನೇ ಸಾಲಿನಿಂದ ಮಹಾದೇವ ಜವಳಿ ಗಿರಣಿಯಲ್ಲಾದ ಲಾಭ ಹಾನಿಯ ವಿವರಗಳು ಈ ಕೆಳಗಿನಂತಿವೆ.

ವರ್ಷ	ಲಾಭ (ರೂ. ಲಕ್ಷಗಳಲ್ಲಿ)	ಹಾನಿ ರೂ. ಲಕ್ಷಗಳಲ್ಲಿ)
೧೯೭೯-೮೦	...	೫.೭೭
೧೯೮೦-೮೧	೦.೪೩	...
೧೯೮೧-೮೨	...	೨೦.೦೦
೧೯೮೨-೮೩	...	೦.೦೯
೧೯೮೩-೮೪ (೩೧-೧-೮೪ರವರೆಗೆ)	೦.೪೨	...

ಇ) ಇಲ್ಲ. ಈ ಗಿರಣಿಯನ್ನು ಕೇಂದ್ರ ಸರ್ಕಾರದವರು ಐಡಿಆರ್ ಅಧಿನಿಯಮದನ್ವಯ ವಹಿಸಿಕೊಂಡು ರಾಜ್ಯ ಸರ್ಕಾರಕ್ಕೆ ಆಡಳಿತವನ್ನು ವಹಿಸಿಕೊಟ್ಟಿದ್ದಾರೆ. ಆದ್ದರಿಂದ ಈ ಗಿರಣಿಯನ್ನು ರಾಜ್ಯ ಸರ್ಕಾರದವರು ಮೊದಲನೆ ಮಾಲೀಕರಿಗೆ ಹಿಂತಿರುಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ರಾಜ್ಯ ಸರ್ಕಾರದವರು ಈ ಗಿರಣಿಯ ಆಡಳಿತವನ್ನು ವಹಿಸಿಕೊಂಡ ನಂತರ ಫ್ರಾನ್ಸ್, ಮಾರಿಷಸ್ ಮತ್ತು ರಷ್ಯಾ ದೇಶಗಳಿಗೆ ಬಟ್ಟೆಯನ್ನು ರಫ್ತು ಮಾಡಿದ್ದು ಅವುಗಳ ವಿವರಗಳು ಈ ಕೆಳಗಿನಂತಿದೆ.

ವರ್ಷ	ಬಟ್ಟೆ (ಲಕ್ಷ ಮೀ.ಗಳಲ್ಲಿ)	ಒಟ್ಟು ಬೆಲೆ (ಲಕ್ಷ ರೂ.ಗಳಲ್ಲಿ
೧೯೭೯-೮೦	೦.೫೦	೧.೮೩
೧೯೮೦-೮೧	೧.೦೦	೩.೭೯
೧೯೮೧-೮೨	...	...
೧೯೮೨-೮೩	೨.೪೬	೨೦.೧೧
೧೯೮೩-೮೪	೦.೦೮	೦.೫೦

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಣಿ ಮಾಡಿರುವುದು.

೪೧೦. ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಪ್ರತಿ ಉದ್ಯೋಗ ವಿನಿಮಯ ಕಛೇರಿಯಲ್ಲಿ ೧೯೮೦-೮೧, ೧೯೮೧-೮೨ ಮತ್ತು ೧೯೮೨-೮೩ನೇ ವರ್ಷಗಳಲ್ಲಿ ಎಷ್ಟು ಮಂದಿ ನಿರುದ್ಯೋಗಿ ಯುವಕರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿದ್ದಾರೆ?

ಆ) ಈ ಪೈಕಿ ಪ್ರತಿ ವರ್ಷ ಎಷ್ಟು ಮಂದಿ ಯುವಕರು ಉದ್ಯೋಗವನ್ನು ಪಡೆದಿದ್ದಾರೆ?

ಇ) ಮೇಲ್ಕಾಣಿಸಿದ ಅಂಕಿ ಅಂಶಗಳ ಮೇರೆಗೆ ಪ್ರತಿ ವರ್ಷ ನಿರುದ್ಯೋಗವು ಬೃಹದಾಕಾರವಾಗಿ ಬೆಳೆಯುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದ ಪಕ್ಷದಲ್ಲಿ ನಿರುದ್ಯೋಗಿ ಸಂಖ್ಯೆಯನ್ನು ಕಡಿಮೆಮಾಡಿ ಉದ್ಯೋಗ ದೊರಕುವಂತೆ ಯಾವ ಕಾರ್ಯಕ್ರಮವನ್ನು ಸರ್ಕಾರ ರೂಪಿಸಿದೆ?

ಶ್ರೀ ಆಜೀಜ್‌ಸೇಟ್ (ಕಾರ್ಮಿಕ ಮಂತ್ರಿಗಳು).—

ಅ) ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳ ಪಾಲ್ತಿ ದಾಖಲೆಗಳಂತೆ ಪ್ರತಿ ವರ್ಷ ೩೧ನೇ ಮಾರ್ಚ್ ದಿನದಂದು ಇರುವ ನಿರುದ್ಯೋಗಿಗಳ ಸಂಖ್ಯೆ.

೧.	೧೯೮೮–೮೧	...	೬,೦೭,೪೩೨
೨.	೧೯೮೧–೮೨	...	೬,೩೧,೦೭೦
೩.	೧೯೮೨–೮೨	...	೬,೯೪,೫೭೩
೪.	೧೯೮೩–೮೪	...	೭.೩೭,೯೩೭

(೧೯೮೪ ಜನವರಿ ೩೧ರ ಬೇತಾರೀಜಿಗೆ)

ಆ) ಮೇಲ್ಕಾಣಿಸಿದ ವರ್ಷಗಳಲ್ಲಿ ರಾಜ್ಯದ ಉದ್ಯೋಗ ವಿನಿಮಯ ಕಛೇರಿಗಳ ಮೂಲಕ ಉದ್ಯೋಗ ವಿನಿಮಯ ಕಛೇರಿಗಳ ಮೂಲಕ ಉದ್ಯೋಗ ಪಡೆದಿರುವ ಸಂಖ್ಯೆ.

೧.	೧೯೮೦–೮೧	...	೧೯,೯೨೨
೨.	೧೯೮೧–೮೨	...	೧೬,೭೫೬
೩.	೧೯೮೨–೮೩	...	೧೮,೬೭೮
೪.	೧೯೮೩–೮೪	...	೧೧,೦೧೦

(೧–೪–೮೩ ರಿಂದ ೩೧–೧–೮೪ರವರೆಗೆ)

ಇ) ಹೌದು.

ಈ) ಸರ್ಕಾರವು ರಾಜ್ಯದಲ್ಲಿ ನಿರುದ್ಯೋಗಿ ಸಂಖ್ಯೆಯನ್ನು ಕಡಿಮೆ ಮಾಡಲು ಸಾಕಷ್ಟು ಯೋಜನೆಗಳನ್ನು ರೂಪಿಸಿದೆ. ಉದಾಹರಣೆಗೆ ೧) ತೀವ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ. ೨) ಕೇಂದ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮ. ೩) ಗ್ರಾಮೀಣ ಯುವಕರಿಗೆ ಸ್ವಯಂ–ಉದ್ಯೋಗ ತರಬೇತಿ. ೪) ಅನಾವೃಷ್ಟಿಪೀಡಿತ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದರ ಮೂಲಕ ನಿರುದ್ಯೋಗಿಗಳಿಗೆ ಪರಿಹಾರ ನೀಡಿದೆ.

ಶಿಷ್ಯವೇತನ ಉದ್ಯೋಗ ಯೋಜನೆ ಕಾರ್ಯಕ್ರಮದಡಿಯಲ್ಲಿ ನಿರುದ್ಯೋಗಿ ಪದವೀಧರರಿಗೆ, ಡಿಪ್ಲೊಮೋದಾರರಿಗೆ ಮತ್ತು ಸ್ನಾತಕೋತ್ತರ ಪದವೀಧರರಿಗೆ ಶಿಷ್ಯವೇತನ ನೀಡುವುದರ ಮೂಲಕ ನಿರುದ್ಯೋಗಿಗಳಿಗೆ ಪರಿಹಾರ ನೀಡಿದಂತಾಗಿದೆ.

ನಿರುದ್ಯೋಗಿ ವಿದ್ಯಾವಂತ ಯುವಕರು ಸ್ವಯಂ ಉದ್ಯೋಗ ಕೈಗೊಳ್ಳುವಂತೆ ಮಾರ್ಗದರ್ಶನಗಳನ್ನು ನೀಡುತ್ತಿದೆ.

ರಾಜ್ಯದಲ್ಲಿ ಮಂಜೂರಾಗಿರುವ ಜನತಾ ಮನೆಗಳು.

೪೧೧. ಶ್ರೀ ಬಿ. ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

೧) ೧–೪–೮೩ ರಿಂದ ೩೧–೧೨–೮೩ರವರೆಗೆ ಮಂಜೂರಾಗಿರುವ ಜನತಾ ಮನೆಗಳೆಷ್ಟು...?

೨) ೧–೪–೮೩ ರಿಂದ ೩೧–೧೨–೮೩ರವರೆಗೆ ಜಿಲ್ಲಾವಾರು ನಿರ್ಮಿಸಲಾದ ಜನತಾ ಮನೆಗಳ ಸಂಖ್ಯೆ ಎಷ್ಟು.

ಶ್ರೀ ಎ. ಲಕ್ಷ್ಮಿಸಾಗರ್ (ವಸತಿ ಮಂತ್ರಿಗಳು).—

೧) ೫೮,೦೦೦ ಮನೆಗಳನ್ನು ಕಟ್ಟಲು ಕೈಗೆತ್ತಿಕೊಂಡಿರುತ್ತೆ.

೨) ೪೯,೫೮೩ ಮನೆಗಳು (ಹಳೆಯ ಶ್ರೇಣಿಗಳು ಸೇರಿ) (ಜಿಲ್ಲಾವಾರು ಪಟ್ಟಿ ಅನುಬಂಧ ೧ನ್ನು ಲಗತ್ತಿಸಿದೆ).

೧–೪–೮೩ ರಿಂದ ೩೧–೧೨–೮೩ರವರೆಗೆ ನಿರ್ಮಿಸಲಾದ ಮನೆಗಳ ವಿವರ